ಅ) ಬೆಂಗಳೂರು-ಮೈಸೂರು ಸೂಪರ್ ಎಕ್ಸಪ್ರೆಸ್ ಮತ್ತು ರಿಂಗ್ ರಸ್ತೆ ಯೋಜನೆ ಯಾವ ಹಂತದಲ್ಲಿದೆ?

ಆ) ಯೋಜನೆಗೆ ರೈತರ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ?

ಇ) ವಶಪಡಿಸಿಕೊಂಡಿರುವ ರೈತರ ಜಮೀನಿಗೆ ಪರಿಹಾರ ಯಾವ ರೀತಿ ನೀಡಲಾಗಿದೆ?

ಈ) ಖುಷ್ಕಿ ಜಮೀನು ಮತ್ತು ನೀರಾವರಿ ಜಮೀನಿಗೆ ಎಕರೆ ಒಂದಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಬೆಂಗಳೂರು-ಮೈಸೂರು ಸೂಪರ್ ಎಕ್ಸ್‌ಪ್ರೆಸ್ ಮತ್ತು ರಿಂಗ್ ರಸ್ತೆ ಯೋಜನೆಯ ಕಾಮಗಾರಿಗಳು ಇನ್ನೂ ಪ್ರಾರಂಭವಾಗಿಲ್ಲ. ಕಂಪೆನಿ ಮತ್ತು ಅವರ ಬ್ಯಾಂಕಿನ ನಡುವೆ ಆರ್ಥಿಕ ಕ್ಲೋಜರ್ ಅಂತಿಮ ಹಂತದಲ್ಲಿರುತ್ತದೆ.

ಆ) 14505 ಎಕರೆ ರೈತರ ಮತ್ತು ಖಾಸಗಿ ಒಡೆತನದ ಜಮೀನನ್ನು ವಶಪಡಿಸಿಕೊಳ್ಳಲು ಕೆ.ಐ.ಡಿ.ಬಿ. ವತಿಯಿಂದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಇ) ಕರ್ನಾಟಕ ಸ್ವಾಮ್ಯದ ಕೆ.ಐ.ಎ.ಡಿ.ಬಿ. ಸಂಸ್ಥೆಯು ಭೂ ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ, ರೈತರ ಜಮೀನಿಗೆ ಸೂಕ್ತ ಪರಿಹಾರವನ್ನು ನಿಗದಿಪಡಿಸಿ ವಿತರಿಸಲಾಗುವುದು.

ಈ) ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಸರ್ಕಾರದ ನಿಯಮಾವಳಿಗಳಂತೆ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ಭೂ ಸ್ವಾಧೀನ ಪಡಿಸಿಕೊಳ್ಳುವ ಖುಷ್ಕಿ ಮತ್ತು ನೀರಾವರಿ ಜಮೀನಿಗೆ ಸೂಕ್ತ ಬೆಲೆಯನ್ನು ನಿಗದಿಪಡಿಸುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕ ಉತ್ತರಹಳ್ಳಿ ಹೋಬಳಿ ಮನವರ್ತೆಕಾವಲ್ ಗ್ರಾಮದಲ್ಲಿ ಅಕ್ರಮವಾಗಿ ಭೂ ಕಬಳಿಕೆ

175 (654) ಶ್ರೀ ಅಶೋಕ್ (ಉತ್ತರಹಳ್ಳಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ "ಮನವರ್ತೆ ಕಾವಲ್" ಗ್ರಾಮದಲ್ಲಿ ಅರಣ್ಯ ಇಲಾಖೆಗೆ ಸೇರಿದ ಸರ್ಕಾರಿ ಜಮೀನನ್ನು ಇಂಡೋ ಅಮೆರಿಕನ್ ಸಂಸ್ಥೆಯವರು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅಕ್ರಮವಾಗಿ ಕಬಳಿಕೆ ಮಾಡಿರುವ ಇಂಡೋ ಅಮೆರಿಕನ್ ಸಂಸ್ಥೆಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಉತ್ತರಹಳ್ಳಿ ಹೋಬಳಿ 'ಮನವರ್ತೆ ಕಾವಲ್' ಗ್ರಾಮದಲ್ಲಿ ಅರಣ್ಯಕ್ಕೆ ಸೇರಿದ ಜಮೀನು ಒತ್ತುವರಿಯಾಗಿದೆಯೆಂದು ಇಲಾಖೆಗೆ ತಿಳಿದು ಬಂದಿದೆ.

ಆ) ಆಗ ಪರಿಶೀಲಿಸಿ, 'ಇಂಡೋ ಅಮೇರಿಕನ್' ಸಂಸ್ಥೆಗೆ ನೋಟೀಸ್ ಕೊಟ್ಟು ಕ್ರಮ ತೆಗೆದುಕೊಳ್ಳುವ ಪ್ರಕ್ರಿಯೆ ನಡೆದಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕ ಸರ್ಕಾರಿ ಖರಾಬು ಜಮೀನನ್ನು ಬೇರೆಯವರಿಗೆ ಅಕ್ರಮ ದಾಖಲಾತಿ

176(657) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕಂಗೇರಿ ಹೋಬಳಿ ಭೀಮನಕುಪ್ಪೆ ಗ್ರಾಮದ ಸರ್ವೆ ನಂ. 180 ರಲ್ಲಿ ಎಷ್ಟು ಎಕರೆ ಸರ್ಕಾರಿ ಖರಾಬು ಜಮೀನಿದೆ.

ಆ) ಈ ಜಮೀನಿನಲ್ಲಿ ಎಷ್ಟು ಎಕರೆ ಜಮೀನನ್ನು ರೈತರಿಗೆ ಮಂಜೂರು ಮಾಡಲಾಗಿದೆ. (ಫಲಾನುಭವಿಗಳ ಪಟ್ಟಿ ನೀಡುವುದು)

ಇ) ಹಾಗಿದ್ದಲ್ಲಿ ಬೆಟ್ಟನಪಾಳ್ಯ ಗ್ರಾಮದ ಹಲವರಿಗೆ ಅಕ್ರಮ ದಾಖಲಾತಿಗಳ ಮೇಲೆ ಜಮೀನು ನೀಡಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡಿ)

ಈ) ಈ ಜಮೀನಿನಲ್ಲಿ ಮೂಲ ಫಲಾನುಭವಿಗಳ ವ್ಯವಸಾಯ ಮಾಡುತ್ತಿದ್ದಾರೆಯೇ? ಅಥವಾ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಲಾಗಿದೆಯೇ? (ವಿವರ ನೀಡುವುದು)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) 75-15 ಎಕರೆ ಸರ್ಕಾರಿ ಖರಾಬು ಜಮೀನಿರುತ್ತದೆ.

ಆ) ಈ ಜಮೀನಿನಲ್ಲಿ ಒಟ್ಟು 18 ಎಕರೆ ಜಮೀನನ್ನು 17 ಜನರಿಗೆ ಮಂಜೂರು ಮಾಡಲಾಗಿದೆ. (ಫಲಾನುಭವಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಇ) ಹೌದು. ಭೂ ಕಂದಾಯ ಕಾಯ್ದೆ ಕಲಂ 136 (3)ರಡಿ ವಿಚಾರಣೆ ನಡೆಸಿ, ಅಕ್ರಮ ದಾಖಲೆಗಳನ್ನು ರದ್ದುಗೊಳಿಸಿದೆ.

ಈ) ಇಲ್ಲ. ಉದ್ಭವಿಸುವುದಿಲ್ಲ.